- -                                   ಓ ಎಸ್ ನಂ.  135 /2019

ಪಿ.ಡಬ್ಲ್ಯೂ :1

ದಿನಾಂಕ :29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

ನಿಪಿ.11 ರ ವಿವರಗಳನ್ನು ಓದಲು ಸಾಧ್ಯವಾಗುವುದಿಲ್ಲವೆಂದರೆ ಸರಿಯಲ್ಲ. ನಿಪಿ.11 ರ ಸರ್ವೆ ನಂ.1 ಎಂಬ ಕಾಲಂ ನಲ್ಲಿ ಸ್ಥಳ ಖ-ಲಿ ಇದೆ ಎಂದರೆ ಸಾಕ್ಷಿಯು ತಹಸಿಲ್ದಾರ್ ರವರ ಕಛೇರಿಯವರು ಏನು ದಾಖಲೆ ನೀಡಿದ್ದಾರೋ ಅದನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ.11 ರಲ್ಲಿ ದಾವಾ ಸರ್ವೆ ನಂಬರಿನ ವಿವರಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.18/5. ನಿಪಿ.11 ಸರ್ವೆ ನಂ.18/5 ಕ್ಕೆ ಸಂಬಂಧಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಪಿ.11 ಸರ್ವೆ ನಂ.18 ಕ್ಕೆ ಸಂಬಂಧಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ.

ನಮ್ಮ ಗ್ರಾಮದಲ್ಲಿ ನಂಜುಂಡಯ್ಯ ಎಂಬ ಹೆಸರಿನ ಹಲವು ವ್ಯಕ್ತಿಗಳು ಇದ್ದಾರೆಂದರೆ ಸಾಕ್ಷಿಯು ಹಲವು ವ್ಯಕ್ತಿಗಳು ಇರಬಹುದು ಆದರೆ ಸರ್ವೆ ನಂ.18 ಕ್ಕೆ ಸಂಬಂಧಿಸಿ ನನ್ನ ತಾತ ನಂಜುಂಡಯ್ಯ ಮಾತ್ರ ಇದ್ದಾರೆಂದು ನುಡಿಯುತ್ತಾರೆ.

ಕೇತುವಾರ ಪತ್ರಿಕೆಯ ನಂತರ ಆರ್.ಆರ್ ಇಂಡೆಕ್ಸ್ ಚಾಲ್ತಿಗೆ ಬಂದಿದೆ ಎಂದರ ಸರಿ. ಸಾಕ್ಷಿಯು ಮುಂದುವರಿದು ಆರ್.ಆರ್ ಇಂಡೆಕ್ಸ್ ಚಾಲ್ತಿಗೆ ಬಂದ ನಂತರ ಅವರುಗಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆಂದು ನುಡಿಯುತ್ತಾರೆ. ಅವರು ಯಾವುದೇ ದಾಖಲೆ ಸೃಷ್ಟಿಸಿಕೊಂಡಿಲ್ಲ , ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.18 ರ ಇತರೆ ಪೋಡುಗಳಲ್ಲಿ ನಮ್ಮ ಹೆಸರುಗಳು ಇರುವ ಕಾರಣ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ. ಆರ್.ಆರ್ ಇಂಡೆಕ್ಸ್ ಚಾಲ್ತಿಗೆ ಬಂದು ಸುಮಾರು 100 ವರ್ಷ ಕಳೆದಿದೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ,  ಸರಿ ಇದೆ, ಎಂದರು.

SD/-

(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .